# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 974 |
| ಸದಸ್ಯರ ಹೆಸರು | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸಬೇಕಾದ ದಿನಾಂಕ | 24.02.2023 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಮಾವು ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿರುವ (ಕೋಲಾರ ಮೊದಲನೇ ಸ್ಥಾನ) ರಾಮನಗರ ಜಿಲ್ಲೆ, ರಾಮನಗರದಲ್ಲಿ ಮಾವು ಸಂಸ್ಕರಣಾ ಘಟಕ ಸ್ಥಾಪನೆ ಮಾಡುವುದು ಸರ್ಕಾರದ ಗಮನದಲ್ಲಿದೆಯೇ: | ಹೌದು |
| ಆ) | ಮಾವು ಸಂಸ್ಕರಣಾ ಘಟಕ ಸ್ಥಾಪನೆ ಸ್ಥಳ ನಿಗಧಿ ಮಾಡಲು ಆಡಳಿತಾತ್ಮಕ ಅಡಚಣೆಗಳು ಇದೆಯೇ; ಇರುವ ತಾಂತ್ರಿಕ ತೊಂದರೆಗಳೇನು: | ರಾಮನಗರದಲ್ಲಿ ಮಾವು ಸಂಸ್ಕರಣಾ ಘಟಕ ಸ್ಥಾಪನೆಗೆ ಸ್ಥಳ ನಿಗಧಿ ಮಾಡಲು ಆಡಳಿತಾತ್ಮಕ ಅಡಚಣೆಗಳು ಇರುವುದಿಲ್ಲ. |
| ಇ) | ಸಂಸ್ಕರಣಾ ಘಟಕ ಸ್ಥಾಪನೆ ಕಾರ್ಯ ಪ್ರಸ್ತುತ ಯಾವ ಹಂತದಲ್ಲಿದೆ? | ರಾಮನಗರದಲ್ಲಿ ಸಂಸ್ಕರಣಾ ಘಟಕ ಸ್ಥಾಪನೆಯ ಪ್ರಸ್ತುತ ಕಾರ್ಯಹಂತದ ವಿವರ ಈ ಕೆಳಕಂಡತಿದೆ;<br>1. ಚನ್ನಪಟ್ಟಣ ತಾ. ಬೈರಾಪಟ್ಟಣ ತೋಟಗಾರಿಕೆ ಕ್ಷೇತ್ರದಲ್ಲಿ ಸರ್ವೆ ನಂ.1019 ರಲ್ಲಿ ಮಾವು ಸಂಸ್ಕರಣಾ ಘಟಕ ಸ್ಥಾಪನೆ ಮಂಜೂರಾಗಿರುವ ಒಟ್ಟಾರೆ 15.00 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 4.00 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ ಮಾವು ಮತ್ತು ಇತರೆ ಉತ್ಪನ್ನಗಳ ಕೋಯ್ಲೋತ್ತರ ನಿರ್ವಹಣೆ, ಸಂಸ್ಕರಣಾ ಪ್ರಾತ್ಯಕ್ಷಿತೆ ಘಟಕ ಸ್ಥಾಪಿಸಲಾಗುವುದು.<br>• ಈ ಸಂಬಂಧ ಸಿವಿಲ್ ಕಾಮಗಾರಿಗಳ ಕೈಗೊಳ್ಳಲು ಬಿಡ್ಡ್ ದಾರರನ್ನು ಅಂತಿಮಗೊಳಿಸಲು ಲೋಕೋಪಯೋಗಿ ಇಲಾಖೆ, ವಿಷೇಶ ವಿಭಾಗ, ರಾಮನಗರ ರವರ ವತಿಯಿಂದ ಆರ್ಥಿಕ ಬಿಡ್ಡ್ ಪರಿಶೀಲನೆಯಲ್ಲಿದ್ದು ಅಂತಿಮಾ ಗೊಳಿಸುವ ಹಂತದಲ್ಲಿದೆ.<br>2. ಉಳಿದಂತಹ, 11.00 ಎಕರೆ ವಿಸ್ತೀರ್ಣದ |

| | | |
|---|---|---|
| | | ಜಮೀನಿನಲ್ಲಿ ವಿವಿದ ತೋಟಗಾರಿಕೆ ಬೆಳೆಗಳ ಸಂಸ್ಕರಣಾ ಘಟಕಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಮಾದರಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ, ಈ ಬಗ್ಗೆ ವಹಿವಾಟು ಸಲಹೆಗಾರರು (Transaction Adviser)ನ್ನು ನೇಮಿಸಲಾಗಿದೆ.<br>• Feasibility ವರದಿಯನ್ನು ಸಿದ್ಧಪಡಿಸಲಾಗುತ್ತಿದ್ದು ಅಂತಿಮಾ ಗೊಳಿಸುವ ಹಂತದಲ್ಲಿದೆ.<br>• ಹೂಡಿಕೆದಾರರನ್ನು ಗುರುತಿಸಲು Request For Expression of Interest (REOI) ಅಹ್ವಾನಿಸಲಾಗಿತ್ತು, ಬಿಡ್ಡುದಾರರ ಬೇಡಿಕೆ ಅನುಸಾರ, ಪರಿಕಲ್ಪನ ಟಿಪ್ಪಣಿ, ಹೂಡಿಕೆ ಮೊತ್ತ ಮತ್ತು ಉತ್ಪನ್ನಗಳ ವಿಧಗಳನ್ನು ಅಂತಿಮಾಗೊಳಿಸುವ ಕಾರ್ಯವನ್ನು ವಹಿವಾಟು ಸಲಹೆಗಾರರು ಕೈಗೊಳ್ಳುತ್ತಿದ್ದಾರೆ. |

**HORTI 105 HGM 2023**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು